**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.531/2025**

**CW- 1** **PW:1**

| | |
|---|---|
| ಸಾಕ್ಷಿಯ ಹೆಸರು | ಃ ಮರೆಪ್ಪ ಈಟಿ |
| ತಂದೆ /ಗಂಡನ ಹೆಸರು | ಃ ಭರಮಪ್ಪ |
| ವಯಸ್ಸು | ಃ 59 ವರ್ಷ |
| ಉದ್ಯೋಗ | ಃ ಪಿ ಎಸ್ ಐ ನವನಗರ ಪೊಲಿಸ ಠಾಣೆ |
| ವಾಸಸ್ಥಳ | ಃ ಹುಬ್ಬಳ್ಳಿ |

ದಿಃ **30.05.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು ಕಳೆದ 2 ವರ್ಷಗಳಿಂದ ಎ ಪಿ ಎಂ ಸಿ ನವನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 21.09.2024 ರಂದು ರಾತ್ರಿ 11.30 ಕ್ಕೆ ಅಮರಗೋಳ ರಾಯಲ್ ರಿಜ್ ಹೊಟೆಲ್ ನಲ್ಲಿ ಜೋರಾಗಿ ಸಂಗೀತ ಹಚ್ಚಿ ಸುತ್ತಮುತ್ತಲೂ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ ಅಂತಾ ಬಾತ್ಮಿ ಬಂದಿತು. ರಾತ್ರಿ 12 ಗಂಟೆ ಆದರೂ ಸಹ ಅವಧಿ ಮೀರಿ ಮದ್ಯ ಸೇವನೆಗೆ ಅವಕಾಶ ಮಾಡಿಕೊಟ್ಟಿರುತ್ತಾರೆ ಅಂತಾ ಮಾಹಿತಿ ಬಂದಿತು. ಈ ವಿಷಯ ಮೇಲಾಧಿಕಾರಿಗಳಿಗೆ ತಿಳಿಸಿ ಚಾಸಾಃ 4 ರವರ ಜೊತೆ ಮಾಹಿತಿ ಬಂದ ಸ್ಥಳಕ್ಕೆ ಹೋದೆವು. ಅಲ್ಲಿ 12 ಗಂಟೆಗೆ ಹೋದಾಗ ಸಹ ಈ ಹೊಟೇಲನವರು ಗ್ರಾಹಕರಿಗೆ ಜೋರಾಗಿ ಸೌಂಡ್ ಹಚ್ಚಿ ಗ್ರಾಹಕರಿಗೆ ಡ್ಯಾನ್ಸ ಮಾಡಲು ಅವಕಾಶ ಮಾಡಿ ಅಲ್ಲಿದ್ದ ಗ್ರಾಹಕರು ಡ್ರಿಂಕ್ಸ ಮತ್ತು ಊಟ ಸಹ ಮಾಡುತ್ತಿದ್ದರು. ಅಲ್ಲಿದ್ದ ಉಸ್ತುವಾರಿಯವರಿಗೆ ಕೆ ಪಿ ಕಾಯ್ದೆ ಪ್ರಕಾರ ನೊಟಿಸ್ ಕೊಟ್ಟು ಬಂದೆ. ದಿಃ 22.09.2024 ರಂದು ರಾಯಲ್ ರಿಜ್ ಹೊಟೆಲಗೆ ಸಂಬಂದಪಟ್ಟ ಸಿಸಿಟಿವಿ ಡಿವಿಆರ್ ನೊಟಿಸ್ ಕೊಟ್ಟು ತರಿಸಿಕೊಂಡೆ. ಸದರಿ ಸಿಸಿಟಿವಿ ಡಿವಿಆರ್ ನ್ನು ವೀಕ್ಷಿಸಿದಾಗ ಸದರಿ ಹೊಟೆಲನವರು ಇದೇ ರೀತಿ ಸೌಂಡ್ ಜೋರಾಗಿ ಇಟ್ಟು ಗ್ರಾಹಕರಿಗೆ ಡ್ಯಾನ್ಸ ಮಾಡಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಇದರಿಂದಾಗಿ ಸುತ್ತಮುತ್ತಲಿನ ಸಾರ್ವಜನಿಕರಿಗೆ ತೊಂದರೆ ಆಗಿದೆ. ನಂತರ ನಾನು ಈ ಹೊಟೆಲನವರ

ವಿರುದ್ದ ಕ್ರಮ ಕೈಗೊಳ್ಳಿ ಅಂತಾ ದೂರು ಕೊಟ್ಟೆ. ನಾನು ನೀಡಿದ ದೂರಿನ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.1 ಎಂದು, ನನ್ನ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ದೂರನ್ನು ದಿಃ 26.09.2024 ರಂದು ನೀಡಿದೆ. ಪುನಃ ಹೇಳಿಕೆಯನ್ನು ದಿಃ 27.09.2024 ರಂದು ನೀಡಿರುತ್ತೇನೆ. ರಾಯಲ್ ರಿಜ್ ಹೊಟೆಲ್ ಅಮರಗೋಳ ಇವರ ಮಾಲಕರು ಅಥವಾ ವ್ಯವಸ್ಥಾಪಕರಿಗೆ ನಾನು ನೀಡಿದ್ದ ನೊಟಿಸ ದ್ವಿಪ್ರತಿಯಲ್ಲಿದ್ದು ಅದರ ಒಂದು ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.2 ಎಂದು, ನನ್ನ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನನಗೆ ತೊರಿದ ನೊಟಿಸ್ ಪ್ರತಿಯಂತೆ ರಾಯಲ್ ರಿಜ್ ಹೊಟೆಲನ ಮಾಲಿಕರಿಗೆ ಸಿಸಿಟಿವಿ ದೃಶ್ಯಾವಳಿಗಳುಳ್ಳ ಡಿವಿಆರ್ ಹಾಜರುಪಡಿಸುವಂತೆ ಕೇಳಿ ನೀಡಿದ್ದರ ನೊಟಿಸನ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.3 ಎಂದು, ನನ್ನ ಸಹಿಯನ್ನು ನಿಪಿ.3 (ಎ) ಎಂದು ಗುರುತಿಸಲಾಯಿತು.

2. ದಿಃ 27.09.2024 ರಂದು ಬೆಳಿಗ್ಗೆ 10.10 ರಿಂದ 11.00 ಗಂಟೆಯವರೆಗೆ ನಾನು ತೊರಿಸಿದ ಸ್ಥಳದಲ್ಲಿ ನವನಗರ ಠಾಣಾ ಪೊಲಿಸನವರು ಪಂಚನಾಮೆ ಮಾಡಿರುತ್ತಾರೆ. ಚಾಸಾಃ 2 ಮತ್ತು 3 ಪಂಚರು ಇದ್ದರು. ಸದರಿ ಘಟನಾ ಸ್ಥಳದ ಪಂಚನಾಮೆಯ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.4 ಎಂದು, ನನ್ನ ಸಹಿಯನ್ನು ನಿಪಿ.4 (ಎ) ಎಂದು ಗುರುತಿಸಲಾಯಿತು. ನಿಪಿ.4 ರ ಸಮಯದಲ್ಲಿ ತೆಗೆದ ನಕಾಶೆಯ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.5 ಎಂದು, ನನ್ನ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ನನಗೆ ತೊರಿದ ಫೋಟೊವನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.4 ರ ಸಮಯದಲ್ಲಿ ತೆಗೆದ ಫೋಟೊ ಆಗಿದೆ. ಸದರಿ ಫೋಟೊವನ್ನು ನಿಪಿ.6 ಎಂದು ಗುರುತಿಸಲಾಯಿತು.

**ಶ್ರೀಮತಿ ವಿ ಬಿ ಸಿ ವಕೀಲರು ಪಾಟಿಸವಾಲಿಗೆ ಸಮಯ ಕೋರಿದ್ದು ವೆಚ್ಚ ವಿಧಿಸಿ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.